# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 416 |
| ಸದಸ್ಯರು ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದ್ದವರು) |
| ಉತ್ತರಿಸಬೇಕಾದ ದಿನಾಂಕ | : | 18-07-2024 |
| ಉತ್ತರಿಸಬೇಕಾದ ಸಚಿವರು | : | ಉಪ ಮುಖ್ಯಮಂತ್ರಿಯವರು |

*****

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಜಲಮಂಡಳಿ ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ಪೂರೈಕೆಗೆ ಕಾವೇರಿ ನದಿಯಿಂದ ವಿವಿಧ ಹಂತದಲ್ಲಿ ಹೊರ ತರುತ್ತಿರುವ ಕುಡಿಯುವ ನೀರಿನ ಪ್ರಮಾಣವೆಷ್ಟು: (ಪೂರ್ಣ ಮಾಹಿತಿ ನೀಡುವುದು) | ಬೆಂಗಳೂರು ನಗರಕ್ಕೆ ದಿನಂಪ್ರತಿ ಕಾವೇರಿ ಮೂಲದಿಂದ ಸುಮಾರು 1450 ದಶಲಕ್ಷ ಲೀಟರ್‌ಗಳಷ್ಟು ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿರುತ್ತದೆ. ವಿವರಗಳು ಈ ಕೆಳಕಂಡಂತಿದೆ.<br><br>ಕಾವೇರಿ 1ನೇ ಹಂತ — 135MLD<br>ಕಾವೇರಿ 2ನೇ ಹಂತ — 135MLD<br>ಕಾವೇರಿ 3ನೇ ಹಂತ — 330MLD<br>ಕಾವೇರಿ 4ನೇ ಹಂತ 1ನೇ ಘಟ್ಟ — 300MLD<br>ಕಾವೇರಿ 4ನೇ ಹಂತ 2ನೇ ಘಟ್ಟ — 550MLD<br>**ಒಟ್ಟು — 1450MLD** |
| ಆ) | ಬೆಂಗಳೂರು ಜಲಮಂಡಳಿ ನಗರಕ್ಕೆ ಕುಡಿಯುವ ನೀರಿನ ಪೂರೈಕೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಾಗೂ ಬಾಹ್ಯ ಸಂಸ್ಥೆಗಳಿಂದ ಪಡೆದಿರುವ ಆರ್ಥಿಕ ನೆರವುಗಳು ಯಾವುವು: ಮತ್ತು ಈ ನೆರವುಗಳ ಪ್ರಸ್ತುತ ಪರಿಸ್ಥಿತಿ ಏನು: (ಪೂರ್ಣ ಮಾಹಿತಿ ನೀಡುವುದು) | ಬೆಂಗಳೂರು ಜಲಮಂಡಳಿ ನಗರಕ್ಕೆ ಕುಡಿಯುವ ನೀರು ಮತ್ತು ಮೂಲಸೌಕರ್ಯಗಳಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಹಾಗೂ ಬಾಹ್ಯ ಸಂಸ್ಥೆಗಳಿಂದ ಪಡೆದಿರುವ ಆರ್ಥಿಕ ನೆರವಿನ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |
| ಇ) | ಬೆಂಗಳೂರು ಜಲಮಂಡಳಿ 2050ನೇ ಇಸವಿ ರವರೆಗೆ ಬೆಂಗಳೂರು ನಗರದ ಬೆಳವಣಿಗೆ ಮತ್ತು ಜನಸಂಖ್ಯೆ ಆಧಾರಿಸಿ ಅಗತ್ಯವಿರುವ ಅಂದಾಜಿಸಿರುವ ಕುಡಿಯುವ ನೀರಿನ ಪ್ರಮಾಣವೆಷ್ಟು: ಮತ್ತು ಈ ನೀರನ್ನು ಯಾವ ಮೂಲಗಳಿಂದ ತರಲು ಯೋಜನೆಗಳನ್ನು ರೂಪಿಸಲಾಗಿದೆ: (ಪೂರ್ಣ ವಿವರ ನೀಡುವುದು) | ಬೆಂಗಳೂರು ಜಲಮಂಡಳಿಯು 2050ನೇ ಇಸವಿಯವರೆಗೆ ಬೆಂಗಳೂರು ನಗರದ ಬೆಳವಣಿಗೆ ಮತ್ತು ಜನಸಂಖ್ಯೆಯನ್ನು ಅಂದಾಜಿಸಿ, 86.5 ಟಿಎಂಸಿ ನೀರಿನ ಅವಶ್ಯಕತೆಯಿರುವುದನ್ನು ಅಂದಾಜಿಸಲಾಗಿದೆ. ಸದರಿ ಅಗತ್ಯವಿರುವಷ್ಟು ನೀರನ್ನು ಈ ಕೆಳಕಂಡ ಮೂಲಗಳಿಂದ ತರಲು ಯೋಜಿಸಲಾಗಿರುತ್ತದೆ.<br>• ಪ್ರಸ್ತುತ ಕಾವೇರಿ ಕಣಿವೆಯಿಂದ ಒಟ್ಟು 35 ಟಿಎಂಸಿ ನೀರು ಹಂಚಿಕೆಯಾಗಿದ್ದು, ಉಳಿದ 51.5 ಟಿಎಂಸಿ ನೀರನ್ನು ಮಳೆನೀರು ಕೊಯ್ಲು ಪದ್ಧತಿ ಮತ್ತು ಸಂಸ್ಕರಿಸಿದ ಪರಿಸರ ಸ್ನೇಹಿ ನೀರಿನ ಪುನರ್ ಬಳಕೆ ಮತ್ತು ಅರ್ಕಾವತಿ ನದಿಯ ಪುನಶ್ಚೇತನ ಯೋಜನೆಗಳೊಂದಿಗೆ ಪೂರೈಸಲು ಯೋಜಿಸಲಾಗಿರುತ್ತದೆ.<br>• ಮೇಕೆದಾಟು ಯೋಜನೆ ಅನುಷ್ಠಾನಗೊಂಡು, ಬೆಂಗಳೂರು ಜಲಮಂಡಳಿಗೆ ನೀರು ಹಂಚಿಕೆಯಾದಲ್ಲಿ, 2050 ನೇ ಇಸವಿಗೆ ನೀರಿನ ಅವಶ್ಯಕತೆಯನ್ನು ಪೂರೈಸಲು ಕ್ರಮ ಕೈಗೊಳ್ಳಲಾಗುವುದು. |

| | | |
|---|---|---|
| ಈ) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರ್ಪಡೆಯಾಗಿರುವ ಬೆಂಗಳೂರು ಸುತ್ತಲಿನ 110 ಹಳ್ಳಿಗಳ ಪ್ರದೇಶಗಳಿಗೆ ಹಾಗೂ ಹೊಸದಾಗಿ ಸೇರ್ಪಡೆಗೊಂಡಿರುವ ಪ್ರದೇಶಗಳಿಗೆ ಪೂರ್ಣ ಪ್ರಮಾಣದ ಕುಡಿಯುವ ನೀರು ಪೂರೈಸುವ ಯೋಜನೆ ಯಾವ ಹಂತದಲ್ಲಿದೆ? (ಈ ಯೋಜನೆ ಪೂರ್ಣ ವಿವರ ನೀಡುವುದು) | • ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾಗಿರುವ 110 ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸಲು ಮೊದಲನೇ ಹಂತದಲ್ಲಿ ಸುಮಾರು 2780 ಕಿಮೀಗಳಷ್ಟು ವಿವಿಧ ವ್ಯಾಸದ ಕೊಳವೆಗಳನ್ನು ಅಳವಡಿಸಲಾಗಿರುತ್ತದೆ.<br>• ಅಧಿಸೂಚಿತ 51 ಹಳ್ಳಿಗಳಿಗೆ ಈಗಾಗಲೇ ನೀರಿನ ಲಭ್ಯತೆ ಮೇರೆಗೆ ನೀರು ಸರಬರಾಜು ಮಾಡಲಾಗುತ್ತಿರುತ್ತದೆ.<br>• ಉಳಿದ ಹಳ್ಳಿಗಳಿಗೆ ಜೈಕಾ ಆರ್ಥಿಕ ನೆರವಿನ ಅಡಿಯಲ್ಲಿ ತೆಗೆದುಕೊಂಡಿರುವ ಕಾವೇರಿ 5ನೇ ಹಂತದ 775 ದ.ಲ.ಲೀ ಯೋಜನೆ ಪೂರ್ಣಗೊಂಡ ನಂತರ ನೀರು ಪೂರೈಸಲಾಗುವುದು.<br>• 110 ಹಳ್ಳಿಗಳ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಗೊಂಡಿರುವ / ಬಿಟ್ಟು ಹೋಗಿರುವ ಪ್ರದೇಶಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಯೋಜನೆಯನ್ನು ಬ್ಯಾಟರಾಯನಪುರ, ಮಹದೇವಪುರ, ಬೊಮ್ಮನಹಳ್ಳಿ, ಆರ್.ಆರ್.ನಗರ & ದಾಸರಹಳ್ಳಿ ವಲಯಗಳಾಗಿ ವಿಂಗಡಿಸಿ, ಕಾಮಗಾರಿಗಳನ್ನು ತೆಗೆದುಕೊಂಡಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. |

ಸಂಖ್ಯೆ: ನಅಇ 103 ಎಂಎನ್ಐ 2024

**(ಡಿ.ಕೆ.ಶಿವಕುಮಾರ್)**
ಉಪ ಮುಖ್ಯಮಂತ್ರಿ

ಅನುಬಂಧ

| ಕ್ರ.ಸಂ. | ಯೋಜನೆ | ಆರ್ಥಿಕ ನೆರವು ರೂ.ಕೋಟಿಗಳಲ್ಲಿ | | | |
|---|---|---|---|---|---|
| | | ಕೇಂದ್ರ ಸರ್ಕಾರ | ರಾಜ್ಯ ಸರ್ಕಾರ | ಬಾಹ್ಯಸಂಸ್ಥೆ-ಜೈಕಾ | ಸದರಿ ಆರ್ಥಿಕ ನೆರವಿನಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ಪ್ರಸ್ತುತ ಹಂತದ ವಿವರ |
| 1 | ಮಂಡಳಿ ರಚನೆ | - | 4.78 | - | ಮಂಡಳಿಯು ಸ್ಥಾಪನೆಗೊಂಡ ದಿನಾಂಕದಿಂದ ಕುಡಿಯುವ ನೀರು ಹಾಗೂ ಇತರೆ ಮೂಲಸೌಕರ್ಯ ಕಾಮಗಾರಿಗಳಿಗಾಗಿ ಈ ಮೊತ್ತವನ್ನು ಭರಿಸಲಾಗಿದ್ದು, ಎಲ್ಲಾ ಕಾಮಗಾರಿಗಳು ಮುಕ್ತಾಯಗೊಂಡಿರುತ್ತದೆ. |
| 2 | ಕುಡಿಯುವ ನೀರು- ಮೂಲಸೌಕರ್ಯ ಯೋಜನೆ | - | 208.27 | - | |
| 3 | ಕುಡಿಯುವ ನೀರು- ಮೂಲಸೌಕರ್ಯ ಯೋಜನೆ | - | 242.05 | - | |
| 4 | ಕುಡಿಯುವ ನೀರು- ಮೂಲಸೌಕರ್ಯ ಯೋಜನೆ | - | 19.38 | - | |
| 5 | ಕಾವೇರಿ ಹಂತ-1, 2,3 | - | 104.12 | - | ಬೆಂಗಳೂರು ನಗರಕ್ಕೆ ಹಂತ ಹಂತವಾಗಿ 135MLD, 135MLD ಮತ್ತು 330MLD ಗಳಂತೆ ಒಟ್ಟಾರೆ 600 MLD ಕಾವೇರಿ ನೀರು ಒದಗಿಸುವ ಯೋಜನೆಯ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ. |
| 6 | ಅಮೃತ್-1 | 489.22 | - | - | ಅಮೃತ್-1 ಯೋಜನೆ ಅಡಿಯಲ್ಲಿ ರೂ.1008.79 ಕೋಟಿ ಮೊತ್ತದ ಯೋಜನೆಗೆ ಕೇಂದ್ರ ಸರ್ಕಾರವು ರೂ.489.22 ಕೋಟಿ ಮೊತ್ತವನ್ನು ತನ್ನ ಪಾಲಿನ ಮೊತ್ತವಾಗಿ ಬಿಡುಗಡೆಗೊಳಿಸಿದೆ. ಉಳಿಕೆ ಮೊತ್ತ ರೂ. 519.57 ಕೋಟಿಗಳನ್ನು ಮಂಡಳಿ ತನ್ನ ಸಂಪನ್ಮೂಲದಲ್ಲಿ ಭರಿಸಿದೆ ಯೋಜನೆಯಲ್ಲಿ ಕುಡಿಯುವ ನೀರು ಮತ್ತು ತ್ಯಾಜ್ಯ ನೀರು ನಿರ್ವಹಣೆಗೆ ಸಂಬಂಧಿಸಿದಂತೆ ಒಟ್ಟು 13 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಸದರಿ ಕಾಮಗಾರಿಗಳು ಮುಕ್ತಾಯಗೊಂಡಿರುತ್ತದೆ. |
| 7 | ಬಿ.ಬಿ.ಎಂ.ಪಿ ಗೆ ಹೊಸದಾಗಿ ಸೇರ್ಪಡೆಗೊಂಡ 110 ಹಳ್ಳಿಗಳಿಗೆ ಮೂಲಸೌಕರ್ಯ-ಕುಡಿಯುವ ನೀರು | - | 1,000.00 | - | ಕಾವೇರಿ-5ನೇ ಹಂತ ಯೋಜನೆಯ 775 ಎಂ.ಎಲ್.ಡಿ. ನೀರು ನಿರೀಕ್ಷಿಸಿ ಬಿ.ಬಿ.ಎಂ.ಪಿ ಗೆ ಹೊಸದಾಗಿ ಸೇರ್ಪಡೆಗೊಂಡ 110 ಹಳ್ಳಿಗಳಿಗೆ ಕುಡಿಯುವ ನೀರು ಮತ್ತು ನೈರ್ಮಲ್ಯ ಕೊಳವೆಗಳನ್ನು ಅಳವಡಿಸುವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. |
| 8 | ಬಿ.ಬಿ.ಎಂ.ಪಿ ಗೆ ಹೊಸದಾಗಿ ಸೇರ್ಪಡೆಗೊಂಡ 110 ಹಳ್ಳಿಗಳಿಗೆ ಮೂಲಸೌಕರ್ಯ-ನೈರ್ಮಲ್ಯ ಸೌಲಭ್ಯ | - | 250.00 | - | |
| 9 | ಕಾವೇರಿ ಹಂತ-4-ಘಟ್ಟ-1 | - | - | 601.97 | ಬೆಂಗಳೂರು ನಗರಕ್ಕೆ ಹಂತ ಹಂತವಾಗಿ 300MLD ಮತ್ತು 550MLD ಗಳಂತೆ ಒಟ್ಟಾರೆ 850 MLD ಕಾವೇರಿ ನೀರು ಒದಗಿಸುವ ಯೋಜನೆಯ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ. |
| 10 | ಕಾವೇರಿ ಹಂತ-4-ಘಟ್ಟ-2 | - | - | 3,512.31 | |
| 11 | ಕಾವೇರಿ ಹಂತ-5 | - | - | 3,096.13 | ಈ ಯೋಜನೆಯ ಮೊತ್ತ ರೂ.5550 ಕೋಟಿಗಳಾಗಿದ್ದು, ಜೈಕಾ ಸಂಸ್ಥೆಯು ರೂ.4661 ಕೋಟಿ ಮೊತ್ತದ ಆರ್ಥಿಕ ನೆರವು ನೀಡುತ್ತಿದ್ದು, ಮಾರ್ಚ್-2024 ರ ಅಂತ್ಯಕ್ಕೆ ರೂ.3096 ಕೋಟಿಗಳ ಸಾಲವನ್ನು ಬಿಡುಗಡೆ ಮಾಡಿದೆ. ಉಳಿಕೆ ರೂ. 889 ಕೋಟಿಗಳ ಮೊತ್ತವನ್ನು ಸಮಭಾಗವಾಗಿ ರಾಜ್ಯ ಸರ್ಕಾರ ಮತ್ತು ಮಂಡಳಿ ಭರಿಸಲಿದ್ದು, ಈ ಯೋಜನೆಯಿಂದ ಹೆಚ್ಚುವರಿಯಾಗಿ 775 MLD ಕಾವೇರಿ ನೀರು ಲಭಿಸಲಿದ್ದು, ಒಟ್ಟಾರೆಯಾಗಿ 2225 MLD ಬೆಂಗಳೂರು ನಗರಕ್ಕೆ ಲಭಿಸಲಿದೆ.<br><br>ಈ ಯೋಜನೆಯಲ್ಲಿ ಕುಡಿಯುವ ನೀರು ಮತ್ತು ತ್ಯಾಜ್ಯ ನೀರಿನ ನೈರ್ಮಲ್ಯ ಯೋಜನೆಯನ್ನು ಕೈಗೊಳ್ಳಲಾಗಿದ್ದು, ಕುಡಿಯುವ ನೀರು ವ್ಯವಸ್ಥೆಯು ಕಾರ್ಯಾರಂಭ ಹಂತದಲ್ಲಿದ್ದು, ನೈರ್ಮಲ್ಯ ಯೋಜನೆಯನ್ನು ಡಿಸೆಂಬರ್-2024ರ ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು. |
| | ಒಟ್ಟು | 489.22 | 1,828.60 | 7,210.41 | |
| | | | 9,528.23 | | |

ಆರ್ಥಿಕ ಸಲಹೆಗಾರರು ಮತ್ತು ಮುಖ್ಯ ಲೆಕ್ಕಾಧಿಕಾರಿಗಳು
ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009